ಕಳಿಸಬೇಕೆಂದು ಮೊಸರು ಸಕ್ಕರೆಯನ್ನೂ ಎಂದೂ ಕೊಡುವುದಿಲ್ಲ. ಅಮ್ಮನಿಗೆ ಬೇಸರವಾಗುತ್ತದೆ. ಯಾರಿಗೂ ಕಾಣದಂತೆ ಕಲ್ಲು ಸಕ್ಕರೆಯನ್ನು ಬಾಯಿಗೆ ಹಾಕುತ್ತಾರೆ. ಅದರ ಸಿಹಿಯನ್ನೇ ನಾನು ಎಷ್ಟೋ ದಿವಸ ಸವಿಯುತ್ತಿರುತ್ತೇನೆ.' ಹೀಗೆ ಏನೋ ಯೋಚಿಸುತ್ತಿರುವಾಗ 'ಏನು ಯೋಚಿಸುತ್ತಿರುವೆ ದೀಪೂ' ಚಿಕ್ಕಮ್ಮ ಕೇಳುತ್ತಾರೆ.

'ಇದು ತುಂಬ ಆಯಿತಲ್ಲ, ಚಿಕ್ಕಮ್ಮ.'

'ಹಾಗಾದರೆ ತೆಗೆದುಕೊಂಡು ಹೋಗಿ ನಿನ್ನ ರೂಮಿನಲ್ಲಿಟ್ಟುಕೋ. ಕಾಲೇಜಿನಿಂದ ಬಂದ ಮೇಲೆ ಹಸಿವಾಗುತ್ತದಲ್ಲ, ಆಗ ತಿನ್ನುವೆಯೆಂತೆ.'

ತಿಂಡಿಯ ತಟ್ಟೆಯನ್ನು ತೆಗೆದುಕೊಂಡು ಬಂದು ನೋಡುತ್ತಾನೆ, ಚಿಕ್ಕಪ್ಪ ಅವನ ಹಾಸಿಗೆಯ ಮೇಲೆ ಕುಳಿತುಕೊಂಡು ಇಪ್ಪತ್ತರ, ಹತ್ತರ, ಐದರ ನೋಟುಗಳನ್ನು ಬೇರೆ ಬೇರೆ ಮಾಡಿ ರಬ್ಬರ್ ಬ್ಯಾಂಡ್ ಹಾಕಿ ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಹಾಕಿ ಅದನ್ನು ಪುಸ್ತಕದ ಬೀರುವಿನಲ್ಲಿ ಮುಚ್ಚಿಟ್ಟರು. ದೀಪಕ ಅದನ್ನು ಆಶ್ಚರ್ಯದಿಂದ ನೋಡಹತ್ತಿದ್ದನ್ನು ನೋಡಿ 'ಇದು ನನ್ನ ಸ್ವಿಸ್ ಬ್ಯಾಂಕ್ ಹುಡುಗ' ಎಂದು ಅವರು ನಸುನಗುತ್ತಾ ಹೇಳಿದರು. 'ಈ ಮನೆಯಲ್ಲಿ ಇದೇ ಭದ್ರವಾದ ಸ್ಥಳ. ಇಲ್ಲಿ ನಿನ್ನ ಚಿಕ್ಕಮ್ಮ ತಪ್ಪಿಯೂ ಬರುವುದಿಲ್ಲ.'

'ಅಂದರೆ! ನೀವು ಚಿಕ್ಕಮ್ಮನಿಗೆ ಗೊತ್ತಾಗದಂತೆ ಇಲ್ಲಿ ಬಚ್ಚಿಡುತ್ತಿದ್ದೀರಾ?'

'ಇನ್ನೇನು ಮಾಡಲಿ ಹೇಳು. ಅವಳು ನನ್ನ ಪೆನ್ಷನ್ನಿನ ಹಣ, ಬಾಡಿಗೆ ಹಣ ಎಲ್ಲವನ್ನೂ ತೆಗೆದುಕೊಂಡು ಬಿಡುತ್ತಾಳೆ. ನನಗ್ಯಾವತ್ತಾದರೂ ಪಾನ್ ತಿನ್ನಬೇಕೆನಿಸಿದರೆ, ಹೊರಗೆ ಟೀ ಕುಡಿಯಬೇಕೆನಿಸಿದರೆ, ಸಿನಿಮಾ ನೋಡಬೇಕೆನಿಸಿದರೆ ಅವಳ ಮುಂದೆ ಕೈಚಾಚಬೇಕು. ಕೇಳಿದರೆ ಕೊಟ್ಟೇ ಕೊಡುವಳಂತೇನೂ ಇಲ್ಲ, ನಿನಗೆ ಗೊತ್ತಾ, ದೀಪಾವಳಿಯಲ್ಲಿ ಏಳುನೂರು ರೂಪಾಯಿ ಗೆದ್ದಿದ್ದೇನೆ.'

'ಮತ್ತೆ, ಮೂರು ನೂರು ರೂಪಾಯಿ ಸೋತಿದ್ದು?'

'ಅದು ನಿನ್ನ ಚಿಕ್ಕಮ್ಮನ ಲೆಕ್ಕಕ್ಕೆ ಸೇರಿದ್ದು. ಸರಿ, ನಿನಗೆ ಹೋಟ್ಲಿಗೆ ಹೋಗಲು ತಡವಾಗುತ್ತದೆ ಹೊರಡು.'

'ಇಷ್ಟೊಂದು ತಿಂಡಿ ಇದೆ, ಹೋಟ್ಲಿಗೆ ಹೋಗಲೋ ಬೇಡವೋ ಎಂದು ಯೋಚಿಸುತ್ತಿದ್ದೇನೆ.' 'ಈ ತಿಂಡಿಯಿಂದೇನಾಗುತ್ತದೆ. ಇದು ಬರೀ ಕುರಕಲಷ್ಟೇ. ಇದರಿಂದೇನು ಹೊಟ್ಟೆ ತುಂಬುವುದಾ? ನೀನು ಯುವಕ, ರೊಟ್ಟಿ ಪಲ್ಲೆ ತಿನ್ನಲೇಬೇಕು, ಹೊರಡು' ಎಂದು ಹೇಳಿ ಹೊರಟವರು ಮತ್ತೆ ಹಿಂದೆ ಬಂದು ಕೇಳಿದರು: 'ಅಲ್ಲವೋ ದೀಪಕ್ ಕಳೆದ ತಿಂಗಳು ಊರಿನಿಂದ ಬೇಗ ದುಡ್ಡು ಬರಲಿಲ್ಲವೆಂದು ನೀನು ಎರಡು ದಿನ ಹೋಟೆಲಿಗೆ ಹೋಗಲೇ ಇಲ್ಲವಂತೆ?'

'ಇದನ್ನೆಲ್ಲಾ ನಿಮಗ್ಯಾರು ಹೇಳಿದರು ಚಿಕ್ಕಪ್ಪ.'

'ಯಾರೇ ಹೇಳಿರಲಿ, ನೀನು ನಿಜವಾಗಿ ಹೀಗೆಲ್ಲ ಮಾಡಿದರೆ ನನಗೆ ತುಂಬ ಬೇಸರವಾಗುತ್ತದೆ. ಹಾಗೇನಾದರೂ ನಿನಗೆ ದುಡ್ಡು ಬೇಕಾದರೆ ನನ್ನನ್ನು ಕೇಳು, ಕೇಳಲು ಸಂಕೋಚವಾದರೆ ನನ್ನ ಸ್ವಿಸ್ ಬ್ಯಾಂಕಿನಿಂದ ತೆಗೆದುಕೋ. ನಿನಗೆ ದುಡ್ಡು ಬಂದ ಮೇಲೆ ಮತ್ತೆ ಇಟ್ಟುಬಿಡು ತಿಳಿಯಿತೇ?' ಅವರು ತನ್ನ ಮೇಲಿಟ್ಟಿರುವ ಪ್ರೀತಿ, ವಿಶ್ವಾಸವನ್ನು ನೋಡಿ ದೀಪಕನ ಹೃದಯ ತುಂಬಿ ಬಂತು. ರಾತ್ರಿ ಮಲಗಿದಾಗಲೂ ಅವನ ಮನಸ್ಸು ಬೀರುವಿನ ಕಡೆಗೇ ಇರುತ್ತಿತ್ತು. ಅದು ಗೋಡೆಯಲ್ಲೇ ಮಾಡಿದ ಎರಡು ಖಾನೆಗಳ ಸಾಧಾರಣ ಬೀರುವಾಗಿತ್ತು. ದೀಪಕನಿಗೆ ರೂಂ ತೋರಿಸುವಾಗ ಚಿಕ್ಕಪ್ಪ– 'ಮಗೂ, ನಿನ್ನ ಪುಸ್ತಕಗಳನ್ನು ನೀನು ಬೇರೆ ಕಡೆಗೆ ಇಟ್ಟುಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಬೇಕಾಗುವುದು. ಯಾಕೆಂದರೆ ಈ ಬೀರುವಿನಲ್ಲಿ ನನ್ನ ಪ್ರೀತಿಯ ಪುಸ್ತಕಗಳಿವೆ. ಇವುಗಳನ್ನು ಬೇರೆ ಕಡೆಗೆ ಇಡಲಾಗುವುದಿಲ್ಲ.